೫. ಸಭೆಯ ಮುಂದೆ ಮಂಡಿಸಲಾದ ಕಾಗದ ಪತ್ರಗಳು

೧. ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—೧೯೫೨ನೇ ಇಸವಿಯ ಭಾರತ ತನಿಖಾ ಆಯೋಗಗಳ ಶಾಸನದ ೩ನೇ ಕಲಮಿನ ಮೇರೆಗೆ ಮೆಸರ್ಸ್ ನಿರ್ಮಲ ಇಂಜಿನಿಯರಿಂಗ್ ಕಂಪನಿ, ಬೆಂಗಳೂರು ಇವರು ನ್ಯೂನತೆಯುಳ್ಳ ಪಂಪ್‌ಸೆಟ್‌ಗಳನ್ನು ಸರಬರಾಜು ಮಾಡಿರುವುದರ ಮೇಲೆ ಶ್ರೀ ಜಗನ್ನಾಥ್ ಹೆಗಡೆಯವರ ತನಿಖಾ ಆಯೋಗದ ವರದಿಯನ್ನು ಹಾಗೂ ಸದರಿ ವರದಿಯ ಮೇಲೆ ಸರ್ಕಾರದವರು ಕೈಗೊಂಡ ಕ್ರಮದ ಬಗ್ಗೆ ಜ್ಞಾಪನ ಪತ್ರದೊಂದಿಗೆ ಸಭೆಯ ಮುಂದಿಡುವುದು.

೨. ಶ್ರೀ ಜೀವರಾಜ್ ಆಳ್ವ (ಉನ್ನತ ಶಿಕ್ಷಣ ಮಂತ್ರಿ).—ಅವರ ಪರವಾಗಿ ಶ್ರೀ ಎ.ಲಕ್ಷ್ಮೀಸಾಗರ (ಮಾನ್ಯ ಕಾನೂನು ಸಚಿವರು) ಮಂಡಿಸಿದರು.

ಅ) ಭಾರತ ಸಂವಿಧಾನದ ೨೧೩(೨)ನೇ ಪರಿಚ್ಛೇದದ ಮೇರೆಗೆ ೧೯೫೫ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧ್ಯಾದೇಶವನ್ನು ಹಾಗೂ

ಆ) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ ೧೯೭೬ರ ನಿಯಮ ೪೨(೩)ರ ಮೇರೆಗೆ ೧೯೫೪-೫೫ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುವುದು.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಮಂಡಿಸಲಾಯಿತು.

೫. ವರದಿಗಳನ್ನೊಪ್ಪಿಸುವುದು

ಶ್ರೀ ಕೆ. ಎಚ್. ಶ್ರೀನಿವಾಸ್ (ಅಧ್ಯಕ್ಷರು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ).—ಅವರ ಪರವಾಗಿ ಶ್ರೀ ಎನ್. ಹೆಚ್. ಗೌಡರವರು.—ಸಾರ್ವಜನಿಕರ ಲೆಕ್ಕಪತ್ರಗಳ ಸಮಿತಿಯ ಈ ಕೆಳಕಂಡ ವರದಿಗಳನ್ನು ಸಭೆಗೆ ಒಪ್ಪಿಸುತ್ತೇನೆ:

ಅ) ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ೧೯೬೯-೭೦ ರಿಂದ ೧೯೭೩-೭೪ನೇ ಸಾಲುಗಳವರೆಗಿನ ಹಣ ವಿನಿಯೋಗ ಮತ್ತು ವಿತ್ತೀಯ ಲೆಕ್ಕಪತ್ರಗಳ ಮೇಲಿನ ಹಾಗೂ ಸದರಿ ಸಾಲುಗಳ ಬಗ್ಗೆ ಭಾರತದ ನಿಯಂತ್ರಣ ಹಾಗೂ ಮಹಾಲೇಖಾಪರೀಕ್ಷಕರ (ಸಿವಿಲ್ ಮತ್ತು ಕಂದಾಯ ಸ್ವೀಕೃತಿ) ವರದಿಗಳ ಬಗ್ಗೆ ಸಮಿತಿಯ ಮೂವತ್ತನೇ ವರದಿ ;

ಆ) ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆಗೆ ಸಂಬಂಧಿಸಿದಂತೆ ೧೯೬೨-೬೩ನೇ ಸಾಲಿನಿಂದ ೧೯೭೪-೭೫ನೇ ಸಾಲುಗಳವರೆಗಿನ ಹಣವಿನಿಯೋಗ ಮತ್ತು ವಿತ್ತೀಯ ಲೆಕ್ಕಪತ್ರಗಳ ಮೇಲಿನ ಹಾಗೂ ಸದರಿ ಸಾಲುಗಳ ಬಗ್ಗೆ ಭಾರತದ ನಿಯಂತ್ರಕ ಹಾಗೂ ಮಹಾಲೇಖಾಪರೀಕ್ಷಕರ ವರದಿಗಳ ಬಗ್ಗೆ ಸಮಿತಿಯ ಮೂವತ್ತೊಂದನೇ ವರದಿ ;

ಇ) ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ೧೯೬೧-೬೨ನೇ ಸಾಲಿನಿಂದ ಹಾಗೂ ೧೯೭೪-೭೫ನೇ ಸಾಲುಗಳ ವರೆಗಿನ ಹಣ ವಿನಿಯೋಗ ಮತ್ತು ವಿತ್ತೀಯ ನಿಯಂತ್ರಕ ಲೆಕ್ಕಪತ್ರಗಳ ಮೇಲಿನ ಹಾಗೂ ಸದರಿ ಸಾಲುಗಳ ಬಗ್ಗೆ ಭಾರತದ ನಿಯಂತ್ರಕ ಹಾಗೂ ಮಹಾಲೇಖಾಪರೀಕ್ಷಕರ ವರದಿಗಳ ಬಗ್ಗೆ ಸಮಿತಿಯ ಮೂವತ್ತೆರಡನೇ ವರದಿಯನ್ನು ಸಭೆಗೆ ಒಪ್ಪಿಸುವುದು.

ಅಧ್ಯಕ್ಷರು.—ವರದಿಗಳನ್ನು ಮಂಡಿಸಲಾಯಿತು.

೬. ಚುನಾವಣಾ ಪ್ರಸ್ತಾಪಗಳು

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಅವರ ಪರವಾಗಿ ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಸಚಿವರು).—ಈ ಕೆಳಕಂಡ ಪ್ರಸ್ತಾಪಗಳನ್ನು ಮಂಡಿಸುತ್ತೇನೆ.

ಅ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡುವಳಿಕೆ ನಿಯಮಗಳ ೨೬೫(೧)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಹನ್ನೆರಡು ಜನ ಸದಸ್ಯರನ್ನು ಚುನಾಯಿಸುವುದು.